# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 2402 |
| ಸದಸ್ಯರ ಹೆಸರು | : | ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 27.03.2026 |
| ಉತ್ತರಿಸುವವರು | : | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದ ಗ್ರಾಮ ಪಂಚಾಯಿತಿಗಳ ಅಧೀನದಲ್ಲಿರುವ ಗ್ರಾಮ ಗ್ರಂಥಾಲಯಗಳಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಗ್ರಂಥಪಾಲಕರ ಒಟ್ಟು ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು) | ರಾಜ್ಯದ ಗ್ರಾಮ ಪಂಚಾಯಿತಿಗಳ ಅಧೀನದಲ್ಲಿರುವ ಗ್ರಂಥಾಲಯಗಳಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಗ್ರಂಥಾಲಯ ಮೇಲ್ವಿಚಾರಕರ ಒಟ್ಟು ಸಂಖ್ಯೆ-5,460.<br><br>ಜಿಲ್ಲಾವಾರು ವಿವರವನ್ನು ಅನುಬಂಧದಲ್ಲಿ ನೀಡಿದೆ. |
| (ಆ) | ಗ್ರಾಮ ಗ್ರಂಥಾಲಯಗಳಲ್ಲಿ ಸೇವೆ ಸಲ್ಲಿಸುತ್ತಿರುವ ಗ್ರಂಥಪಾಲಕರಿಗೆ ರಾಜ್ಯ ಸರ್ಕಾರ ಹೊರಡಿಸಿರುವ ಅಧಿಸೂಚನೆಯ ಪ್ರಕಾರ ನಿಗಧಿಪಡಿಸಿದ ಕನಿಷ್ಟ ವೇತನವನ್ನು ನೀಡಲಾಗುತ್ತಿಲ್ಲ ಎಂಬ ದೂರುಗಳು ಸರ್ಕಾರಕ್ಕೆ ಗಮನಕ್ಕೆ ಬಂದಿದೆಯೇ; ಬಂದಿದ್ದರೇ, ಆ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳ ವಿವರ ಹಾಗೂ ಬಾಕಿ ವೇತನ ಪಾವತಿಗೆ ಕೈಗೊಂಡಿರುವ ಕ್ರಮಗಳ ವಿವರ ನೀಡುವುದು; | ಬಂದಿದೆ.<br><br>ಗ್ರಂಥಾಲಯ ಮೇಲ್ವಿಚಾರಕರಿಗೆ 2025-26ನೇ ಸಾಲಿಗೆ ಕಾರ್ಮಿಕ ಇಲಾಖೆಯ ಆದೇಶದಂತೆ ₹ 19201.32 ಗಳ ಕನಿಷ್ಠ ವೇತನ ನಿಗದಿಪಡಿಸಲಾಗಿದೆ.<br><br>ಇದರಲ್ಲಿ ₹ 12000.00 ಗಳನ್ನು ಸರ್ಕಾರದಿಂದ ಗ್ರಾಮ ಪಂಚಾಯತಿಗಳಿಗೆ ಬಿಡುಗಡೆ ಮಾಡಿ ಗ್ರಂಥಾಲಯ ಮೇಲ್ವಿಚಾರಕರಿಗೆ ಪ್ರತಿ ಮಾಹೆ ವೇತನ ಪಾವತಿಸಲಾಗುತ್ತಿದೆ.<br><br>ಬಾಕಿ ವೇತನ ವ್ಯತ್ಯಾಸದ ಮೊತ್ತ ₹ 7201 ಗಳನ್ನು ಗ್ರಾಮ ಪಂಚಾಯಿತಿಗಳು ಸಂಗ್ರಹಿಸುವ ಶೇ. 6 ರ ಗ್ರಂಥಾಲಯ ಉಪಕರದಿಂದ ಪಾವತಿಸಲು ಆದೇಶ ಮಾಡಲಾಗಿರುತ್ತದೆ.<br><br>ಅದರಂತೆ, ಗ್ರಾಮ ಪಂಚಾಯಿತಿಗಳು ಸಂಗ್ರಹಿಸುವ ಶೇ. 6 ರ ಗ್ರಂಥಾಲಯ ಉಪಕರವನ್ನು ಜಿಲ್ಲಾ ಪಂಚಾಯತಿಗಳಲ್ಲಿ ತೆರೆಯಲಾದ ಬ್ಯಾಂಕ್ ಖಾತೆಗೆ ಜಮಾ ಮಾಡಿ ಸದರಿ ಖಾತೆಯಿಂದ ವೇತನದ ವ್ಯತ್ಯಾಸ ಪಾವತಿಸಲು ಗ್ರಾಮ ಪಂಚಾಯಿತಿಗಳಿಗೆ ಹಣ ಬಿಡುಗಡೆ ಮಾಡಲಾಗುತ್ತಿದೆ.<br><br>ಕೆಲವು ಜಿಲ್ಲೆಗಳಲ್ಲಿ ವೇತನದ ವ್ಯತ್ಯಾಸದ ಮೊತ್ತ ಪಾವತಿಸಲು ಬಾಕಿ ಇದ್ದು, ಬಾಕಿಯಿರುವ ವೇತನ ಪಾವತಿಸಲು ಜಿಲ್ಲೆಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿರುತ್ತದೆ. |

| | | |
|---|---|---|
| (ಇ) | ಗ್ರಾಮ ಗ್ರಂಥಾಲಯಗಳಲ್ಲಿ ಕೆಲಸ ಮಾಡುತ್ತಿರುವ ಗ್ರಂಥಪಾಲಕರ ಸೇವೆಯನ್ನು ನಿಯಮಿತಗೊಳಿಸುವುದು ಅಥವಾ ಶಾಶ್ವತ ನೇಮಕಾತಿ ನೀಡುವ ಕುರಿತು ಸರ್ಕಾರದ ಪರಿಗಣನೆಯಲ್ಲದೆಯೇ; ಇದ್ದರೆ, ಅದರ ವಿವರ ಹಾಗೂ ಕೈಗೊಳ್ಳಲಾಗಿರುವ ಕ್ರಮಗಳೇನು; (ಮಾಹಿತಿ ನೀಡುವುದು) | ಗ್ರಾಮ ಪಂಚಾಯಿತಿ ಅರಿವು ಕೇಂದ್ರದ ಗ್ರಂಥಾಲಯ ಮೇಲ್ವಿಚಾರಕರಿಗೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರಗಳ ಮೇಲ್ವಿಚಾರಕರ ಸೇವಾ) ನಿಯಮಗಳು, 2022, ದಿನಾಂಕ: 14.11.2022 ರನ್ವಯ ಸದರಿಯವರನ್ನು ನೇಮಕ ಮಾಡಿಕೊಳ್ಳಲಾಗುತ್ತಿದೆ. |
| (ಈ) | ಗ್ರಾಮ ಗ್ರಂಥಾಲಯಗಳಲ್ಲಿ ವ್ಯಾಪ್ತಿಯ ಗ್ರಂಥಪಾಲಕರಿಗೆ ನಿಗದಿತ ವೇತನ ಪಾವತಿ ಕಡಿಮೆಯಾಗಲು ಆಡಳಿತಾತ್ಮಕ ದೋಷಗಳು, ಅನುದಾನ ಬಿಡುಗಡೆ ವಿಳಂಬ, ಅಥವಾ ವರ್ಗೀಕರಣ ಸಂಬಂಧಿತ ಸಮಸ್ಯೆಗಳು ಕಾರಣವಾಗಿದೆಯೇ; ಇದ್ದರೆ, ಅದರ ಕುರಿತು ಸಂಪೂರ್ಣ ವಿವರವನ್ನು ನೀಡುವುದು; | ವೇತನ ಪಾವತಿಗೆ ಸಂಬಂಧಿಸಿದಂತೆ ಆಯುಕ್ತಾಲಯದ ಪತ್ರ ಸಂಖ್ಯೆ:ಕಪಂರಾಅ/ ಅಭಿವೃದ್ಧಿ/ಗ್ರಂಥಾಲಯ/262/2022 ದಿನಾಂಕ: 30-12-2023 ಮತ್ತು ದಿನಾಂಕ:09-05-2024 ರ ಪತ್ರಗಳಲ್ಲಿ ಸ್ಪಷ್ಟವಾದ ನಿರ್ದೇಶನಗಳನ್ನು ಜಿಲ್ಲೆಗಳಿಗೆ ನೀಡಲಾಗಿರುತ್ತದೆ.<br><br>ಅದರಂತೆ ನಿಗದಿಪಡಿಸಿರುವ ಕನಿಷ್ಠ ವೇತನದಲ್ಲಿ ₹12000.00 ಗಳನ್ನು ಸರ್ಕಾರದಿಂದ ಗ್ರಾಮ ಪಂಚಾಯತಿಗಳಿಗೆ ನೀಡಲಾಗುವ ಅನುದಾನದಿಂದ ನಿಯಮಿತವಾಗಿ ಪ್ರತಿ ಮಾಹೆ ಪಾವತಿಸಲಾಗುತ್ತಿದೆ.<br><br>ಗ್ರಾಮ ಪಂಚಾಯಿತಿಗಳು ಸಂಗ್ರಹಿಸುವ ಶೇ. 6 ರ ಗ್ರಂಥಾಲಯ ಉಪಕರವನ್ನು ಜಿಲ್ಲಾ ಪಂಚಾಯತಿಗಳಲ್ಲಿ ತೆರೆಯಲಾದ ಬ್ಯಾಂಕ್ ಖಾತೆಗೆ ಜಮಾ ಮಾಡಿ ಸದರಿ ಖಾತೆಯಿಂದ ವೇತನದ ವ್ಯತ್ಯಾಸ ಪಾವತಿಸಲು ಗ್ರಾಮ ಪಂಚಾಯಿತಿಗಳಿಗೆ ಹಣ ಬಿಡುಗಡೆ ಮಾಡಲಾಗುತ್ತಿದೆ. |
| (ಉ) | ಈ ರೀತಿಯ ವೇತನ ಪಾವತಿ ಸಮಸ್ಯೆಗಳು ಉಂಟಾಗದಂತೆ ಮಾಡಲು ಸರ್ಕಾರವು ಸಂಬಂಧಿತ ಗ್ರಾಮ ಪಂಚಾಯತಿಗಳಿಗೆ ಯಾವುದೇ ಸ್ಪಷ್ಟ ಮಾರ್ಗಸೂಚಿಗಳು ಅಥವಾ ತಿದ್ದುಪಡಿ ಆದೇಶಗಳನ್ನು ನೀಡಿದೆಯೇ; ನೀಡಿದ್ದರೆ, ಅದರ ವಿವರಗಳನ್ನು ನೀಡುವುದು; | |
| (ಊ) | ಗ್ರಾಮ ಗ್ರಂಥಾಲಯಗಳ ಗ್ರಂಥಪಾಲಕರಿಗೆ ವೇತನ ಪಾವತಿಯಲ್ಲಿ ಬಾಕಿ ಇವರು ವೇತನ (ಅರಿಯರ್ಸ್)ವನ್ನು ಯಾವ ದಿನಾಂಕದೊಳಗೆ ಪಾವತಿಸಲಾಗುವುದು; (ವಿವರ ನೀಡುವುದು) | ಗ್ರಾಮ ಪಂಚಾಯಿತಿ ಅರಿವು ಕೇಂದ್ರದ ಗ್ರಂಥಾಲಯ ಮೇಲ್ವಿಚಾರಕರಿಗೆ ಬಾಕಿ ಇರುವ ವೇತನ (ಅರಿಯರ್ಸ್)ವನ್ನು ಪಾವತಿಸಲು ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಯ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಅರೆ ಸರ್ಕಾರಿ ಪತ್ರ ಹಾಗೂ ಪತ್ರಗಳನ್ನು ಹೊರಡಿಸಲಾಗಿರುತ್ತದೆ. |
| (ಋ) | ಇಂತಹ ವೇತನ ವ್ಯತ್ಯಾಸ ಮತ್ತು ಬಾಕಿ ಪಾವತಿ ಸಮಸ್ಯೆಗಳು ಭವಿಷ್ಯದಲ್ಲಿ ಉಂಟಾಗದಂತೆ ಮಾಡಲು ಸರ್ಕಾರವು ಸಂಬಂಧಿತ ಗ್ರಾಮ ಪಂಚಾಯತಿಗಳಿಗೆ ಯಾವುದೇ ಸ್ಪಷ್ಟ ಮಾರ್ಗಸೂಚಿ ಅಥವಾ ಮೇಲ್ವಿಚಾರಣಾ ವ್ಯವಸ್ಥೆಯನ್ನು ರೂಪಿಸುವ ಉದ್ದೇಶ ಹೊಂದಿದೆಯೇ? (ಇದ್ದರೆ ಅದರ ವಿವರಗಳನ್ನು ನೀಡುವುದು) | ವೇತನ ವ್ಯತ್ಯಾಸ ಮತ್ತು ಬಾಕಿ ಪಾವತಿ ಸಮಸ್ಯೆಯನ್ನು ಪರಿಹರಿಸಲು ಮಾರ್ಗ ಸೂಚಿಗಳನ್ನು ಹೊರಡಿಸುವ ಕುರಿತು ಸರ್ಕಾರದ ಪರಿಶೀಲನೆಯಲ್ಲಿದೆ. |

ಸಂಖ್ಯೆ: ಗ್ರಾಅಪ 328 ಗ್ರಾಪಂಅ 2026

ವಿಧಾನ ಪರಿಷತ್ತಿನ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:2402ಕ್ಕೆ

## ಅನುಬಂಧ

### ರಾಜ್ಯದ ಗ್ರಾಮ ಪಂಚಾಯಿತಿ ಅರಿವು ಕೇಂದ್ರಗಳಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಗ್ರಂಥಾಲಯ ಮೇಲ್ವಿಚಾರಕರ ವಿವರ

| ಕ್ರ.ಸಂ. | ಜಿಲ್ಲೆ ಯ ಹೆಸರು | ಜಿಲ್ಲೆಯ ಒಟ್ಟು ಗ್ರಾಮ ಪಂಚಾಯಿತಿ ಅರಿವು ಕೇಂದ್ರಗಳ ಸಂಖ್ಯೆ | ರಾಜ್ಯದಲ್ಲಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಅರಿವು ಕೇಂದ್ರಗಳಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಗ್ರಂಥಾಲಯ ಮೇಲ್ವಿಚಾರಕರ ಸಂಖ್ಯೆ |
|---|---|---|---|
| 1 | ಬಾಗಲಕೋಟೆ | 180 | 172 |
| 2 | ಬಳ್ಳಾರಿ | 100 | 84 |
| 3 | ಬೆಂಗಳೂರು ನಗರ | 86 | 77 |
| 4 | ಬೆಂಗಳೂರು(ಗ್ರಾ) | 97 | 89 |
| 5 | ಬೆಳಗಾವಿ | 486 | 425 |
| 6 | ಬೀದರ್ | 183 | 173 |
| 7 | ಚಾಮರಾಜನಗರ | 128 | 121 |
| 8 | ಚಿಕ್ಕಬಳ್ಳಾಪುರ | 153 | 145 |
| 9 | ಚಿಕ್ಕಮಗಳೂರು | 226 | 208 |
| 10 | ಚಿತ್ರದುರ್ಗ | 202 | 187 |
| 11 | ದಕ್ಷಿಣ ಕನ್ನಡ | 212 | 207 |
| 12 | ದಾವಣಗೆರೆ | 206 | 197 |
| 13 | ಧಾರವಾಡ | 140 | 104 |
| 14 | ಗದಗ | 124 | 119 |
| 15 | ಹಾಸನ | 257 | 254 |
| 16 | ಹಾವೇರಿ | 217 | 201 |
| 17 | ಕಲಬುರಗಿ | 262 | 235 |
| 18 | ಕೊಡಗು | 98 | 86 |
| 19 | ಕೋಲಾರ | 157 | 148 |
| 20 | ಕೊಪ್ಪಳ | 150 | 137 |
| 21 | ಮಂಡ್ಯ | 234 | 202 |
| 22 | ಮೈಸೂರು | 236 | 221 |
| 23 | ರಾಯಚೂರು | 179 | 168 |
| 24 | ರಾಮನಗರ | 130 | 123 |
| 25 | ಶಿವಮೊಗ್ಗ | 258 | 248 |
| 26 | ತುಮಕೂರು | 336 | 324 |
| 27 | ಉಡುಪಿ | 150 | 149 |
| 28 | ಉತ್ತರ ಕನ್ನಡ | 228 | 214 |
| 29 | ವಿಜಯಪುರ | 202 | 196 |
| 30 | ವಿಜಯನಗರ | 143 | 128 |
| 31 | ಯಾದಗಿರಿ | 124 | 118 |
| **ಒಟ್ಟು** | | **5884** | **5460** |